ಓಎಸ್ 275/2023

ಡಿಡಬ್ಲ್ಯೂ 1

**ಸಾಕ್ಷಿಯು ದಿಃ 01.08.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿಗಳ ಪರ ವಕೀಲರಿಂದ**

ನಿಡಿ 1 ಅಟಲಾಸ್ ನಲ್ಲಿ ತೋರಿಸಿರುವ ಸ್ವತ್ತಿನಲ್ಲಿ ಹಾದು ಹೋಗಿರುವ ರಸ್ತೆಯನ್ನು ತೋರಿಸಿ ಸರ್ವೇ ನಂಬರ್ 49 ರಲ್ಲಿ ಒಟ್ಟು 5 ಎಕರೆ 16 ಗುಂಟೆ ಆಸ್ತಿ ಇತ್ತು. ಸದರಿ ಸರ್ವೇ ನಂಬರ್ ನಲ್ಲಿ ಹಾದು ಹೋಗಿರುವ ರಸ್ತೆಯ ವಿಸ್ತೀರ್ಣವನ್ನು ಕಳೆದು 3 ಎಕರೆ 16 ಗುಂಟೆ ವಿಸ್ತೀರ್ಣದ ಸ್ವತ್ತು ನನ್ನ ತಂದೆ ಮಾದಯ್ಯ ರವರಿಗೆ ಸರ್ವೇ ನಂಬರ್ 49 ರಲ್ಲಿ ಉಳಿದಿರುತ್ತದೆ ಎಂದರೆ ಸರಿ. ಹಾಗಾಗಿ ದಾವ ಐಟಂ ನಂಃ 2 ರ ಸರ್ವೇ ನಂಬರ್ 49 ರಲ್ಲಿ 3 ಎಕರೆ 16 ಗುಂಟೆಯಲ್ಲಿ ವಾದಿಗಳಿಗೆ ಹಿಸ್ಸೆ ಬರಬೇಕು ಎಂದರೆ ಸಾಕ್ಷಿಯು ಇಲ್ಲ ರಸ್ತಯಿಂದ ಉತ್ತರಕ್ಕೆ ನನ್ನ ಚಿಕ್ಕಪ್ಪ ಮಲಿಯಯ್ಯ ರವರಿಗೆ 1 ಎಕರೆ 28 ಗುಂಟೆ ಆಸ್ತಿ ಸೇರಬೇಕು ಮತ್ತು ದಕ್ಷಿಣಕ್ಕೆ 1 ಎಕರೆ 28 ಗುಂಟೆ ನನ್ನ ತಂದೆ ಮಾದಯ್ಯ ರವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ದಾವ ಐಟಂ ನಂಃ 2ನೇ ಸ್ವತ್ತು ನನ್ನ ತಂದೆಯ ತಂದೆ ಮಾದಯ್ಯ ರವರಿಂದ ನನ್ನ ತಂದೆ ಮಾದಯ್ಯ ರವರಿಗೆ ಬಂದಿರುತ್ತದೆ. ದಾವ ಐಟಂ ನಂಃ 2ನೇ ಸ್ವತ್ತಿನ ಸಂಪೂರ್ಣ ಆಸ್ತಿಯಲ್ಲಿ ವಾದಿಗಳು ಮತ್ತು ಪ್ರತಿವಾದಿಗಳಾದ ನಾವು ಸ್ವಾಧೀನದಲ್ಲಿದ್ದೇವೆ ಹಾಗೂ ಮಲಿಯಯ್ಯ ರವರಿಗೆ ದಾವ ಐಟಂ ನಂಃ2ನೇ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ